# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

# Bangalore Development Authority


ಸಂಖ್ಯೆ : ಬೆಂ.ಅ.ಪ್ರಾ/ನಮ/ಅ.ಸ/ಅ.ಅ–3/ತಾ.ಸ–4/ಪೂ/23/2020–21
No.

ದಿನಾಂಕ : 25.02.2021.
Date :

ಅನುಸೂಚಿ–ಎ 5
(ಉಪವಿಧಿ ಸಂಖ್ಯೆ:4.1)
**ನಕ್ಷೆ ಮಂಜೂರಾತಿ ಪತ್ರ**

ಅಭಿಯಂತರ ಸದಸ್ಯರವರ ಕಛೇರಿ,
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ,
ಬೆಂಗಳೂರು.

ಶ್ರೀಮತಿ/ಶ್ರೀ

ಮುಖ್ಯ ಅಭಿಯಂತರರು
ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ,
ಕಾವೇರಿ ಭವನ, 9ನೇ ಮಹಡಿ, ಇ ಮತ್ತು ಎಫ್ ಬ್ಲಾಕ್
ಕೆಂಪೇಗೌಡ ರಸ್ತೆ, ಬೆಂಗಳೂರು–560 009.

ಮಾನ್ಯರೆ,

ಅರ್ಜಿದಾರರಾದ ತಾವು ದಿನಾಂಕ: 05.02.2020 ರಲ್ಲಿ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿರುವ ಮೇರೆಗೆ, ಬೆಂಗಳೂರು ಜಿಲ್ಲೆ, ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಗೂಳಿಮಂಗಲ ಗ್ರಾಮದ ಸರ್ವೆ ನಂ. 67 ರಲ್ಲಿನ 05 ಎಕರೆ ವಿಸ್ತೀರ್ಣದ ಪೈಕಿ 03ಎಕರೆ 34ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಬ್ಲಾಕ್–ಎ ರಲ್ಲಿ 1ಬಿ.ಹೆಚ್.ಕೆ ಮಾದರಿಯ ಸ್ಟಿಲ್ಟ್+12 ಮೇಲಂತಸ್ತುಗಳನ್ನೊಳಗೊಂಡ 344 ವಸತಿ ಘಟಕಗಳು ಮತ್ತು ಬ್ಲಾಕ್–ಬಿ ರಲ್ಲಿ 2 ಬಿ.ಹೆಚ್.ಕೆ ಮಾದರಿಯ ಸ್ಟಿಲ್ಟ್+08 ಮೇಲಂತಸ್ತುಗಳನ್ನೊಳಗೊಂಡ 148 ವಸತಿ ಘಟಕಗಳು ಒಳಗೊಂಡ ಒಟ್ಟು 492 ವಸತಿ ಘಟಕಗಳ ಕಟ್ಟಡಕ್ಕೆ ನಕ್ಷೆ ಮಂಜೂರಾತಿ ನೀಡಲು ಮಾನ್ಯ ಆಯುಕ್ತರವರ ಕಛೇರಿ ಆದೇಶದ ಸಂಖ್ಯೆ: 2953, ದಿನಾಂಕ: 10.11.2020 ರಂದು ಅನುಮೋದನೆ ನೀಡಿದ್ದು, ನಿರ್ಮಾಣದಾರರು ಚಲನ್ ಸಂಖ್ಯೆ: 11136 & 11137, ದಿನಾಂಕ: 10.02.2021 ರಂದು ಒಟ್ಟು ರೂ. 68,82,265/– ಗಳನ್ನು ಪಾವತಿಸಿರುತ್ತಾರೆ. ಅದರಂತೆ ದಿನಾಂಕ: 25.02.2021 ರಲ್ಲಿ ನಕ್ಷೆ ಮಂಜೂರಾತಿ ಮಾಡಲಾಗಿದೆ. ದಿನಾಂಕ: 25.02.2021 ರಿಂದ ದಿನಾಂಕ: 24.02.2023 ವರೆಗಿನ ಎರಡು ವರ್ಷಗಳ ಅವಧಿಗೆ ಮಾತ್ರ ಮಾನ್ಯತೆ ಪಡೆದಿರುತ್ತದೆ. ಈ ಕೆಳಕಂಡ ಷರತ್ತುಗಳನ್ನು ವಿಧಿಸಿ ಮಂಜೂರಾತಿ ಮಾಡಲಾಗಿದೆ ಎಂದು ಈ ಮೂಲಕ ನಾನು ತಿಳಿಯಪಡಿಸಿದ್ದೇನೆ.

**ಷರತ್ತುಗಳು**

1) ಪ್ರಾಧಿಕಾರದ ಮಂಜೂರಾದ ನಕ್ಷೆಯ ಪ್ರತಿಯನ್ನು ಕಟ್ಟಡ ನಿರ್ಮಾಣ ಮಾಡುವ ಸ್ಥಳದಲ್ಲಿ ಪ್ರದರ್ಶಿಸತಕ್ಕದ್ದು.
2) ಸಂಬಂಧಪಟ್ಟ ಪ್ರಾಧಿಕಾರದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರವರಿಗೆ ಅರ್ಜಿ ಸಲ್ಲಿಸಿ ಪ್ರಾರಂಭ ಮಾಡಲು ಸೂಕ್ತ ಅನುಮತಿ ಪತ್ರ ಪಡೆಯತಕ್ಕದ್ದು.
3) ಮಂಜೂರಾತಿಯಾದ ನಕ್ಷೆಯ ಪ್ರಕಾರ ಕಟ್ಟಡ ನಿರ್ಮಾಣ ಮಾಡತಕ್ಕದ್ದು.
4) ಪೂರ್ಣಗೊಂಡ ಕಟ್ಟಡ ಅಥವಾ ಮನೆಯನ್ನು ವಾಸಕ್ಕೆ ಉಪಯೋಗಿಸುವ ಮೊದಲು ಸಂಬಂಧಪಟ್ಟ ಅಧಿಕಾರಿಗಳಿಂದ (ಪ್ರಾಧಿಕಾರದ) ವಾಸಯೋಗ್ಯ ಅನುಮತಿ ಪತ್ರವನ್ನು ಪಡೆಯತಕ್ಕದ್ದು.
5) ನಿವೇಶನದ ಸುತ್ತಳತೆಯಲ್ಲಿ ಹಸಿರು ಸಸಿಗಳನ್ನು ನೆಡುವುದು.
6) ಇವುಗಳೊಂದಿಗೆ ಈ ಪುಟದ ಹಿಂಬಾಗದಲ್ಲಿ ನಮೂದಿಸಿರುವ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು.

25/2/2021

ಪುಟ ಸಂಖ್ಯೆ: 2 ಕ್ಕೆ ಮುಂದುವರೆದಿದೆ...

ಆಯುಕ್ತರ ಪರವಾಗಿ,
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು